ಶ್ರೀ ಶರಣಬಸಪ್ಪ ದರ್ಶನಾಪುರ (ಇಂದನ ರಾಜ್ಯ ಸಚಿವರು) :—

ಅ) ಅಕ್ರಮವಾಗಿ ಸಂಪರ್ಕಗಳನ್ನು ಪಡೆದ ನೀರಾವರಿ ಪಂಪ್‌ಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲು ನಿಗದಿಪಡಿಸಲಾಗಿದ್ದ ಅಂತಿಮ ದಿನಾಂಕ: 26-3-99. ಈ ಸಕ್ರಮೀಕರಣದ ಬಾಬ್ತು ಮಂಡಡಳಿಯು 26-3-99ರ ಅಂತ್ಯಕ್ಕೆ, ಒಟ್ಟು 34.77 ಕೋಟಿ ರೂ.ಗಳ ಶಲ್ಕವನ್ನು ವಸೂಲು ಮಾಡಲಾಗಿದೆ. ಈ ಮೊತ್ತವು ಸಕ್ರಮೀಕರಣದ ಬಗ್ಗೆ ವಸೂಲು ಮಾಡಿದ ಹಣವಾದ್ದರಿಂದ ಇದರಲ್ಲಿ ಲಾಭ ಅಥವಾ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮಂಡಳಿಯು ವಿದ್ಯುತ್ ಮಾರ್ಗಗಳ ಬಲವರ್ಧನೆ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರ ಮೂಲಕ ಅಕ್ರಮ ನೀರಾವರಿ ಪಂಪುಸೆಟ್ಟುಗಳ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ಸಂಪರ್ಕ ವ್ಯವಸ್ಥೆಗಳಲ್ಲಿ ಆದ ತೊಂದರೆಯನ್ನು ನಿವಾರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಅಂತರ್ಜಲ ಅಭಿವೃದ್ಧಿ.

997(1437) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

ಆ) ಈ ಕಾರ್ಯಕ್ರಮಗಳಿಗೆ 1996-97, 1997-98 ಮತ್ತು 1998-99 ಸಾಲಿನಲ್ಲಿ ಒದಗಿಸುದ ಯೋಜನಾ ವೆಚ್ಚವೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) ಖರ್ಚಾದ ಹಣವೆಷ್ಟು?

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಅಂತರ್ಜಲ ಅಭಿವೃದ್ಧಿ ಸಲುವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಅಂತರ್ಜಲ ಕೃಷಿ ಮರು ಪೂರ್ಣಕ ರಚನೆಗಳಾದ ಅಣ್ಣೆಕೋಡಿ, ಇಂಗು ಬಾವಿ, ಕೃಷಿ ಹೈಕ್ ಹಾಗೂ ಗೋಕಟ್ಟೆಗಳಲ್ಲಿ ಹೂಳೆತ್ತುವ ನಿರ್ಮಾಣದ ಕಾರ್ಯಕ್ರಮಗಳನ್ನು ಪ್ರಯೋಗಾತ್ಮಕವಾಗಿ ಹಮ್ಮಿಕೊಂಡಿದೆ.

ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ - 1

ಕಳೆದ 3 ವರ್ಷಗಳಿಂದ ಅಂತರ್ಜಲ ಅಭಿವೃದ್ಧಿಗೆ ಜಿಲ್ಲಾವಾರು ಒದಗಿಸಿದ ಹಣ ಮತ್ತು ಖರ್ಚುಗಳ ವಿವರ

(ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	96-97	ಖರ್ಚಾದ ಹಣ	97-98	ಖರ್ಚಾದ ಹಣ	98-99	ಖರ್ಚಾದ ಹಣ	ಷರಾ
1.	ಬೆಂಗಳೂರು	7.00	7.00	39.38	39.38	18.315	--	
2.	ಬಿಜಾಪುರ	--	--	5.35	5.35		--	
3.	ಬೆಳಗಾವಿ	1.00	1.00	--	--	25.99	--	
4.	ಬೀದರ್	--	--	3.50	3.50	7.88	--	
5.	ಬಳ್ಳಾರಿ	2.00	2.00	2.22	2.22	10.91	--	
6.	ಚಿತ್ರದುರ್ಗ	2.90	2.90	3.60	3.60	28.06	--	
7.	ಚಿಕ್ಕಮಗಳೂರು	1.98	1.98	5.95	5.95	--	--	
8.	ಧಾರವಾಡ	2.00	2.00	0.95	0.95	--	--	
9.	ದಕ್ಷಿಣ ಕನ್ನಡ	1.00	1.00	3.00	3.00	--	--	
10.	ಗುಲ್ಬರ್ಗ	--	--	2.00	2.00		--	
11.	ಹಾಸನ	--	--	2.50	2.50	6.55	--	
12.	ಕೋಲಾರ	8.00	8.00	19.60	19.60	--	--	
13.	ಮಂಡ್ಯ	--	--	2.00	2.00	--	--	
14.	ಮೈಸೂರು	3.77	3.77	5.25	5.27	16.805	--	
15.	ರಾಯಚೂರು	1.00	1.00	2.00	2.00	--	--	
16.	ಶಿವಮೊಗ್ಗ	3.65	3.65	--	--	4.00	--	
17.	ತುಮಕೂರು	--	--	4.20	4.20	20.72	--	
18.	ಉತ್ತರ ಕನ್ನಡ	2.00	2.00	--	--	--		
	ಒಟ್ಟು	36.30	36.30	96.16	96.16	139.23		